/631416/2024

ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIOEST(3)/13/2023

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 25.06.2024

**ಜ್ಞಾಪನ**

**ವಿಷಯ** : ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳಲ್ಲಿ ಇಲಾಖೆಯ ಅನುಮತಿ ಇಲ್ಲದೆ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆದಿರುವ ಕುರಿತು.

**ಉಲ್ಲೇಖ**: 1. ಮಾಲೀಕರು, ಸ್ಟಾರ್ ಡಿಟೆಕ್ಟೀವ್ ಮ್ಯಾನ್ ಪವರ್ ಸರ್ವೀಸ್, ಚಾಮರಾಜಪೇಟೆ, ಬೆಂಗಳೂರು ಇವರ ಮನವಿಗಳ ಮೇರೆಗೆ

2. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಸೊರಬ ಇವರ ಪತ್ರ ದಿ: 15.02.2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ಮಾಲೀಕರು, ಸ್ಟಾರ್ ಡಿಟೆಕ್ಟೀವ್ ಮ್ಯಾನ್ ಪವರ್ ಸರ್ವೀಸ್, ಬೆಂಗಳೂರು ಇವರು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಟೆಂಡರ್ ಪ್ರಕ್ರಿಯೆಗಳು ನಡೆಯುತ್ತಿದ್ದು, ಸದರಿ ಟೆಂಡರ್ ಪ್ರಕ್ರಿಯೆಗಳ ಮಧ್ಯಂತರ ಅವಧಿಯಲ್ಲಿ ಸಂಸ್ಥೆಗಳಲ್ಲಿ ಈ ಹಿಂದಿನ ಗುತ್ತಿಗೆದಾರರು ಸಂಸ್ಥೆಯ ಭದ್ರತಾ ಸಿಬ್ಬಂದಿಗಳ ಸೇವೆ ನಿರ್ವಹಿಸುತ್ತಿದ್ದರಿಂದ ಬದಲಿ ಭದ್ರತಾ ವ್ಯವಸ್ಥೆ ಆಗುವವರೆಗೂ ಸಂಸ್ಥೆಯ ಹಿತದೃಷ್ಟಿಯಿಂದ ಪಹರೆ ಕಾರ್ಯ ನಿರ್ವಹಿಸಲು ಸದರಿ ಸಂಸ್ಥೆಗಳ ಪ್ರಾಂಶುಪಾಲರುಗಳ ಲಿಖಿತ ಆದೇಶದ ಮೇರೆಗೆ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲಾಗಿದ್ದು, ಸದರಿ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಿರುವುದಕ್ಕೆ ಅನುಮೋದನೆ ನೀಡಿ, ಬಾಕಿ ವೇತನ ಮಂಜೂರು ಮಾಡುವಂತೆ ಕೋರಲಾಗಿದೆ.

ಈ ಸಂಬಂಧ ಸದರಿ ಏಜೆನ್ಸಿಯವರ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಲು ಹಾಗೂ ಭದ್ರತಾ ಏಜೆನ್ಸಿಗಳಿಂದ ಪ್ರಾಂಶುಪಾಲರು ಹಂತದಲ್ಲಿ ಸಂಸ್ಥೆಯ ಕಟ್ಟಡ, ದಾಸ್ತಾನು, ಪೀಠೋಪಕರಣಗಳ ಭದ್ರತಾ ಹಿತದೃಷ್ಟಿಯಿಂದ ಪಹರೆ ಕೆಲಸಗಳಿಗಾಗಿ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸಿರುವ ಬಗ್ಗೆ / ಪಡೆದುಕೊಂಡಿರುವ ಬಗ್ಗೆ ಪರಿಶೀಲಿಸುವ ಸಲುವಾಗಿ, ಈ ಸಂಬಂಧ ಸಂಸ್ಥೆಯಲ್ಲಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ದಾಖಲೆಗಳನ್ನು **ಕಡ್ಡಾಯವಾಗಿ ದೃಢೀಕರಿಸಿ** ಕೂಡಲೇ ಸಲ್ಲಿಸಲು ಸೂಚಿಸಿದೆ. **ದಾಖಲೆಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿದ ನಂತರ ದೃಢೀಕರಿಸಿ ಸಲ್ಲಿಸುವಂತೆ ಸೂಚಿಸಲಾಗಿದೆ**.

1. ಸಂಸ್ಥೆಯಲ್ಲಿ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಳ್ಳಲು ಇಲಾಖೆಯು ನೀಡಿದ್ದ ಕಾರ್ಯಾದೇಶದ ಪ್ರತಿ, ಅದರಂತೆ ಸಂಸ್ಥೆಯಲ್ಲಿ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆದಿರುವ ಅವಧಿ, ಸದರಿ ಅವಧಿಯಲ್ಲಿ

ಕಾರ್ಯನಿರ್ವಹಿಸಿದ ಭದ್ರತಾ ಸಿಬ್ಬಂದಿಗಳ ವಿವರ ಹಾಗೂ ಸದರಿ ಭದ್ರತಾ ಸಿಬ್ಬಂದಿಗಳಿಗೆ ವೇತನವನ್ನು RTGS/NEFT ಮುಖಾಂತರ ಪಾವತಿಸಿರುವ ಬಗ್ಗೆ ಹಾಗೂ EPF, ESI ಖಾತೆಗೆ ಜಮಾ ಮಾಡಿರುವ ಬಗ್ಗೆ ಮತ್ತು ಸದರಿ ಅವಧಿಯಲ್ಲಿ ನಿಯಮಾನುಸಾರ ಅನ್ವಯಿಸಲಿದ್ದ ಆದಾಯ ತೆರಿಗೆ / ಜಿಎಸ್‌ಟಿ / ಟಿಡಿಎಸ್ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಏಜೆನ್ಸಿಯವರಿಂದ ಪಡೆದು ಸಲ್ಲಿಸತಕ್ಕದ್ದು ಮತ್ತು ಭದ್ರತಾ ಸಿಬ್ಬಂದಿಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸಿರುವ ಬಗ್ಗೆ ದೃಢೀಕರಣ;

2. ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಂಡಿರುವ / ಮುಂದುವರೆಸಿರುವ ಸಂದರ್ಭದಲ್ಲಿ ಮಂಜೂರಾದ, ಭರ್ತಿಯಾದ ಮತ್ತು ಖಾಲಿಯಿದ್ದ ಗ್ರೂಪ್-ಡಿ ಹುದ್ದೆಗಳ ವಿವರ;
3. ಖಾಲಿಯಿದ್ದ ಗ್ರೂಪ್-ಡಿ ಹುದ್ದೆಗೆದುರಾಗಿ ನೇಮಿಸಿಕೊಂಡಿದ್ದ ಭದ್ರತಾ ಸಿಬ್ಬಂದಿಗಳ ವಿವರ;
4. ಪ್ರಾಂಶುಫಾಲರು ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಂಡಿರುವುದಕ್ಕೆ / ಮುಂದುವರೆಸಲು ಏಜೆನ್ಸಿಯವರಿಗೆ ನೀಡಿರುವ ಒಪ್ಪಿಗೆ ಪತ್ರ;
5. ಭದ್ರತಾ ಏಜೆನ್ಸಿಯವರು ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ನೀಡಿರುವ ಒಪ್ಪಿಗೆ ಪತ್ರ;
6. ಮುಂದುವರೆಸಿದ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಭದ್ರತಾ ಸಿಬ್ಬಂದಿಗಳ ಹೆಸರು ಮತ್ತು ಗುರುತಿನ ಚೀಟಿ;
7. ಮುಂದುವರೆಸಿದ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಭದ್ರತಾ ಸಿಬ್ಬಂದಿಗಳ ಹಾಜರಾತಿ ವಹಿ ಪ್ರತಿ;
8. ಮುಂದುವರೆಸಿದ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಭದ್ರತಾ ಸಿಬ್ಬಂದಿಗಳಿಗೆ ಪಾವತಿಸಬೇಕಾದ ಒಟ್ಟು ಮೊತ್ತದ ವಿವರ;
9. ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಭದ್ರತಾ ಸಿಬ್ಬಂದಿಗಳಿಗೆ ಏಜೆನ್ಸಿಯವರು ವೇತನವನ್ನು RTGS/NEFT ಮುಖಾಂತರ ಪಾವತಿಸಿರುವ ಬಗ್ಗೆ ಏಜೆನ್ಸಿಯವರಿಂದ ದಾಖಲೆಗಳನ್ನು ಪಡೆದು ಸಲ್ಲಿಸತಕ್ಕದ್ದು;
10. ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಭದ್ರತಾ ಸಿಬ್ಬಂದಿಗಳಿಗೆ ಸದರಿ ಅವಧಿಯ EPF, ESI ಖಾತೆಗೆ ಏಜೆನ್ಸಿಯವರು ಜಮಾ ಮಾಡಿರುವ ಬಗ್ಗೆ ಏಜೆನ್ಸಿಯವರಿಂದ ದಾಖಲೆಗಳನ್ನು ಪಡೆದು ಸಲ್ಲಿಸತಕ್ಕದ್ದು.
11. ಭದ್ರತಾ ಸಿಬ್ಬಂದಿಗಳು ತೃಪ್ತಿಕರವಾಗಿ ಸೇವೆ ಸಲ್ಲಿಸಿರುವ ಬಗ್ಗೆ ದೃಢೀಕರಣ.

Signed by
Prasanna H
Date: 02-07-2024 15:02:41

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

1. ತಾಂತ್ರಿಕ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಪಾಲಿಟೆಕ್ನಿಕ್ / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ;
2. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

ಪ್ರತಿ:-

1. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;

3. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ವೆಬ್‌ಸೈಟ್‌ನಲ್ಲಿ ಅಳವಡಿಸಲು).